ಓ ಎಸ್ ನಂಃ 200-17
ಡಿ ಡಬ್ಲ್ಯೂ ಃ 1

**ದಿಃ 19-11-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ** 4 ಮತ್ತು 10 ನೇ ಪ್ರತಿವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ

20. ನಾನು ಹುಟ್ಟಿದ ದಿನಾಂಕ ನನಗೆ ಗೊತ್ತಿಲ್ಲ. ನಾನು ಮೊದಲನೆ ಮಗ. ನಮ್ಮೊಳಗೆ ವಿಭಾಗ ಮಾಡಿಕೊಂಡಿದ್ದು ಆ ಬಗ್ಗೆ ದಾಖಲೆ ಮಾಡಿಕೊಂಡಿಲ್ಲ. ನನ್ನ ತಂದೆಗೆ 10 ಎಕರೆ ಜಮೀನಿದ್ದು, ನಮ್ಮ ಅಣ್ಣ ತಮ್ಮಂದಿರದ್ದು 7-8, 10 ಎಕರೆ ಇರುತ್ತದೆ. ನನ್ನಲ್ಲಿ 25 ವರ್ಷಗಳಿಂದ ಗನ್ ಇದೆ. ಅದರ ಲೈಸನ್ಸ್ ನವೀಕರಣ ಆಗದೆ ಎಷ್ಟು ವರ್ಷ ಆಯಿತು ಎಂದರೆ ಸಾಕ್ಷಿ 5 ವರ್ಷ ಆಗಿದೆ ಎಂದು ಹಾಗೂ ನನಗೆ ವಯಸ್ಸಾಗಿರುವುದ್ದರಿಂದ ಸರ್ಕಾರದವರು ತೆಗೆದುಕೊಂಡು ಹೋದರು ಎಂದು ನುಡಿಯುತ್ತಾರೆ. ನಾನೇ ಪೋಲಿಸ್ ಠಾಣೆಗೆ ತೆಗೆದುಕೊಂಡು ಹೋಗಿ ಸರಂಡರ್ ಮಾಡಿರುತ್ತೇನೆ. ಅದಕ್ಕೆ ಹಿಂಬರಹ ಕೊಟ್ಟಿದ್ದಾರೆ. ಗನ್ ಅವಶ್ಯಕತೆ ನನಗೆ 20 ವರ್ಷದ ಹಿಂದೆ ಇತ್ತು. ಅದನ್ನು ಪ್ರಾಣಿಗಳು ಹಾಗೂ ಮನುಷ್ಯರ ಮೇಲೆ ಉಪಯೋಗಿಸಿರುವುದಿಲ್ಲ.

21. ದಾವಾ ಸ್ವತ್ತು ಇರುವ ಊರಿನಲ್ಲಿ ನನ್ನ ವಾಸ. ಪ್ರತಿವಾದಿಗಳು ಎಲ್ಲಿ ವಾಸವಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂ. 62 ರಲ್ಲಿ ಕಟ್ಟಡ ಇರುವುದಿಲ್ಲ. ಸರ್ವೆ ನಂ. 62 ರಲ್ಲಿ ದೇವಸ್ಥಾನದ ಕಟ್ಟಡ ಇದೆ. ಪ್ರತಿವಾದಿ 4 ಮತ್ತು ನನಗೆ ಪರಿಚಯವಿಲ್ಲ. ಅವರು ಜಮೀನು ತೆಗೆದುಕೊಂಡ ನಂತರ ನಾನು ಅವರನ್ನು ನೋಡಿದ್ದೇನೆ. ನನ್ನ ಕುಲ ಬಾಂದವರು ಮಾಗಡಿ ತಾಲ್ಲೂಕಿನ ಮತ್ತಿಕೆರೆ ಗ್ರಾಮದಲ್ಲಿರುವುದಿಲ್ಲ. ದಾವಾ ಸರ್ವೆ ನಂ. 62 ಕ್ಕೆ ಈ ದಾವೆಯ ಮುಂಚೆ ಮತ್ತು ಈ ದಾವೆ ಚಾಲ್ತಿಯಲ್ಲಿರುವಾಗ ಎಷ್ಟು ಪ್ರಕರಣಗಳು ಇವೆ ಎಂದು ನನಗೆ ಗೊತ್ತಿಲ್ಲ.

22. ನಾನು ಮಾಗಡಿ, ರಾಮನಗರ, ಬೆಂಗಳೂರು, ದೊಡ್ಡಬಳ್ಳಾಪುರ ಮತ್ತು ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ಕೇಸ್ ನಡೆಸಿರುತ್ತೇನೆ ಎಂದರೆ ಸಾಕ್ಷಿ ಮಾಗಡಿ, ರಾಮನಗರ, ಬೆಂಗಳೂರು, ದೊಡ್ಡಬಳ್ಳಾಪುರದಲ್ಲಿ ಕೇಸು ನಡೆಸಿರುತ್ತೇನೆ ಎಂದು ನುಡಿದಿರುತ್ತಾರೆ. ನಾನು ಕಳೆದ 40 ವರ್ಷಗಳಿಂದ ಸರ್ಕಾರಿ ರಜೆ ಬಿಟ್ಟು ಉಳಿದೆಲ್ಲಾ ದಿನ ಒಂದಲ್ಲಾ ಒಂದು ನ್ಯಾಯಾಲಯದಲ್ಲಿ ಇರುತ್ತಿದ್ದೆ ಎಂದರೆ ಸರಿಯಲ್ಲ.

23. ಸರ್ವೆ ನಂ.62/1 ಎ ಕೇಸ್ ಸಂಬಂಧಪಟ್ಟಂತೆ ಸರ್ವೆ ಇಲಾಖೆಯಲ್ಲಿ ಬಾಕಿ ಇದೆ. ಈ ದಾವೆ ಸಲ್ಲಿಸಿದ ನಂತರ ಆ ಕೇಸನ್ನು ಡಿಡಿಎಲ್ಆರ್ ರವರ ಮುಂದೆ ಹಾಕಿರುತ್ತೇನೆ. ತಹಶೀಲ್ದಾರ್ ಅಥವಾ ಮೋಜಿಣಿ ಇಲಾಖೆಗೆ ಪೋಡಿ ಮಾಡಿಕೊಡಿ ಎಂದು ಅರ್ಜಿ ಸಲ್ಲಿಸಿದ್ದೀರ ಎಂದರೆ ಸಾಕ್ಷಿ

ನ್ಯಾಯಾಲಯ ಆ ಪ್ರಶ್ನೆಗೆ ಉತ್ತರಿಸಿ ಎಂದರೆ ಉತ್ತರಿಸದೆ ನನಗೆ ನ್ಯಾಯಾಲಯದಿಂದ ಆದೇಶವಾಗಿದೆ ಎ ಸಿ ಮುಂದೆ ಹಾಕಿದ್ದೇನೆ ಎಂದು ನುಡಿಯುತ್ತಾರೆ. ಪೋಡಿ ಮಾಡಲು ಅಥವಾ ಗುರುತು ಹಚ್ಚಿಕೊಡಲು ಮೂಲ ಅಧಿಕಾರ ಇರುವುದು ತಹಶೀಲ್ದಾರ್ ಅಥವಾ ಎಡಿಎಲ್ಆರ್ ಗೆ ಇರುವುದು ಎಂದರೆ ಸಾಕ್ಷಿ ಉತ್ತರಿಸದೆ ಸುಮ್ಮನಿರುತ್ತಾರೆ. ಎಸಿ ರವರು ಪ್ರಥಮ ಹಂತದ ಅಧಿಕಾರಿ ಅಲ್ಲದೆ ಇರುವುದರಿಂದ ಮೇಲ್ಮನವಿ ಅಧಿಕಾರ ಇರುವುದು ಎಂದರೆ ಸಾಕ್ಷಿ ಉತ್ತರಿಸದೆ ಸುಮ್ಮನಿರುತ್ತಾರೆ.

24. ಒಎಸ್ 363/2012 ರಲ್ಲಿ ನಕ್ಷೆಯನ್ನು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಹಾಜರು ಪಡಿಸಿರುವುದಿಲ್ಲ. ದಾವಾ ಸ್ವತ್ತಿಗೆ ಜಾರಿ ಅರ್ಜಿಯಲ್ಲಿ ಕೈ ನಕ್ಷೆ ಹಾಕಿರುತ್ತೇನೆ. ಆ ಕೈ ನಕ್ಷೆಗೆ ಸರ್ಕಾರಿ ಮುದ್ರೆ ಇರಲಿಲ್ಲ. ಆ ಜಾರಿ ಅರ್ಜಿಯಲ್ಲಿ ನಾನು ಸ್ವಾಧೀನ ಪಡಿಸಿಕೊಂಡೆ ಎಂದು ಹೇಳುವ ಸಮಯದಲ್ಲಿ ಯಾವುದೇ ನಕ್ಷೆ ಡಿಕ್ರಿ ಜೊತೆ ಇರಲಿಲ್ಲ ಎಂದರೆ ಸರಿಯಲ್ಲ. ಅಮೀನ್ ಸ್ವಾಧೀನ ಕೊಟ್ಟರು ಎಂದು ಹೇಳಲು ಯಾವುದೇ ಚಕ್ಕುಬಂದಿ ಹಾಗೂ ಕುರುಹು ಇದ್ದ ದಾಖಲೆಗಳು ಗುರುತು ಹಚ್ಚಲು ಇರಲಿಲ್ಲ ಎಂದರೆ ಸರಿಯಲ್ಲ.

25. ಪ್ರತಿವಾದಿ 1 ರಿಂದ 3 ರವರು ಆ ದಾವೆಯಲ್ಲಿ ಏಕಪಕ್ಷೀಯವಾಗಿದ್ದು. ನ್ಯಾಯಾಲಯದ ನಿಯೋಗಿ ಮೂಲಕ ಮಾಗಡಿ ಉಪನೊಂದಣಾಧಿಕಾರಿ ಕಛೇರಿ ನಾನು ಹೇಳಿದಂತಹ ಕ್ರಯಪತ್ರ ನೋಂದಣಿಯಾಗುವಾಗ 11 ಇ ಸ್ಕೆಚ್ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.62/1 ಎ ರಲ್ಲಿ ಒಟ್ಟು ವಿಸ್ತೀರ್ಣ 1 ಎಕರೆ 35 ಗುಂಟೆ. ದಾವಾ ಸ್ವತ್ತು ಅದರ ಪೈಕಿಯಾಗಿರುತ್ತದೆ. ದಾವಾ ಸ್ವತ್ತು ಅದರ ಪೈಕಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**